ಅಸಲು ದಾವಾ ಸಂಖ್ಯೆ - 209/2024
ಪಿಡಬ್ಲ್ಯೂ - 01
ದಿನಾಂಕಃ 25-09-2024
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ.ಐ.ಐ.ಜೆ ವಕೀಲರಿಂದಃ**

ಈ ದಾವೆಯಲ್ಲಿ ನಾನು ವಾದಿಯಾಗಿದ್ದು, ಇಂದು ನಾನು ನನ್ನ ಮೌಖಿಕ ಸಾಕ್ಷ್ಯದ ಬದಲು ಈ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಇದರಲ್ಲಿ ಬರೆದ ಎಲ್ಲ ವಿಷಯ ನಿಜ ಮತ್ತು ಸರಿ ಇದ್ದು ನನಗೆ ಗೊತ್ತಿದೆ.

ನಾನು ಈ ಕೆಳಕಂಡ ದಸ್ತಾವೇಜುಗಳನ್ನು ಹಾಜರು ಪಡಿಸಿದ್ದೇನೆ.

ಸವಣೂರು ಗ್ರಾಮದ ಸರ್ವೇ ನಂಬರ 267 ರ 2023-24 ನೇ ಸಾಲಿನ ಉತಾರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ.1 ಎಂದು ಗುರುತಿಸಲಾಯಿತು.

ದಿಃ18-03-2024 ರಂದು ಪ್ರತಿವಾದಿಗೆ ಕಳುಹಿಸಿದ ಕಾನೂನುಬದ್ಧ ನೋಟೀಸಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 2 ಎಂದು ಗುರುತಿಸಲಾಯಿತು.

ಅಂಚೆ ರಶೀದಿ ಮತ್ತು ಅಂಚೆ ಸ್ವೀಕೃತಿ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ.3 ಮತ್ತು ನಿಪಿ 4 ಎಂದು ಗುರುತಿಸಲಾಯಿತು.

ದಿಃ15-02-2024 ರಂದು ಆದ ನೊಂದಾಯಿಸದ ಖರೀದಿ ಸಂಚಗಾರ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 5 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯಲ್ಲಿ ಕೋರಿಕೊಂಡಂತೆ ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿಯರು ಏಕತರ್ಫಿ ಇರುವುದರಿಂದ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು